ಸಂ:ಇಎಕ್ಸ್‌ಇ/ಚಿಪುರ/ನೇಮಕಾತಿ/ವಾಚಾ/24/2015-16.

ಜಿಲ್ಲಾಧಿಕಾರಿಗಳ ಕಛೇರಿ
ಚಿಕ್ಕಬಳ್ಳಾಪುರ ಜಿಲ್ಲೆ,
ಚಿಕ್ಕಬಳ್ಳಾಪುರ, ದಿನಾಂಕ:15/10/2019.

## : : ಅಧಿಕೃತ ಜ್ಞಾಪನ : :

**ವಿಷಯ:-** ಚಿಕ್ಕಬಳ್ಳಾಪುರ ಜಿಲ್ಲಾ ಅಬಕಾರಿ ಇಲಾಖೆಗೆ ಹಂಚಿಕೆಯಾಗಿರುವ ಮೂರು ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.

**ಉಲ್ಲೇಖ:-** 1) ಸರ್ಕಾರದ ಆದೇಶ ಸಂ:ಎಫ್‌ಡಿ/31/ಇಎಪಿಎಸ್/1999, ದಿನಾಂಕ:03/06/1999.
2) ಅಬಕಾರಿ ಆಯುಕ್ತರು, ಬೆಂಗಳೂರು ರವರ ಪತ್ರ ಸಂ:ಇಸಿಇ/32/ವಾಚಾ/ನೇಮಕಾತಿ/2008, ದಿ:17/11/2011.
3) ಜಿಲ್ಲಾಧಿಕಾರಿಗಳು ಹಾಗೂ ಅಬಕಾರಿ ವಾಹನ ಚಾಲಕರ ನೇಮಕಾತಿ ಆಯ್ಕೆ ಸಮಿತಿ ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧಿಸೂಚನೆ ಸಂ:19/05/2016.

* * * *

ಚಿಕ್ಕಬಳ್ಳಾಪುರ ಜಿಲ್ಲಾ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 03 ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಸರ್ಕಾರ ಉಲ್ಲೇಖ (1) ರಂತೆ ಅನುಮತಿ ನೀಡಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಉಲ್ಲೇಖ (3) ರಂತೆ ಅಧಿಸೂಚನೆ ಹೊರಡಿಸಿ ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ನಿಗಧಿಯಾದ ಕೊನೆಯ ದಿನಾಂಕಕ್ಕೆ 96 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸ್ವೀಕೃತಗೊಂಡ 96 ಅರ್ಜಿಗಳಲ್ಲಿ ಅರ್ಹಗೊಂಡ 26 ಅಭ್ಯರ್ಥಿಗಳ ಪೈಕಿ 1:5 ರ ಅನುಪಾತದಲ್ಲಿ 16 ಅರ್ಹ ಅಭ್ಯರ್ಥಿಗಳಿಗೆ ದಿನಾಂಕ:28/02/2018, 01/03/2018, 28/08/2019 ಮತ್ತು 04/09/2019 ರಂದು ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. 16 ಅಭ್ಯರ್ಥಿಗಳ ಪೈಕಿ 05 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. ಉಳಿದ 11 ಅಭ್ಯರ್ಥಿಗಳಿಂದ ಪಡೆದ ದಾಖಲಾತಿಗಳಲ್ಲಿ 7ನೇ ತರಗತಿಯ ಅಂಕಪಟ್ಟಿಯ ನೈಜತೆ ದೃಢೀಕರಣಕ್ಕಾಗಿ ಸಂಬಂಧಪಟ್ಟ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪತ್ರ ಬರೆದು ನೈಜತೆ ಬಗ್ಗೆ ದೃಢೀಕರಣ ಪಡೆಯಲಾಗಿರುತ್ತದೆ.

ಈ 1:5 ಅನುಪಾತದಲ್ಲಿ ವೈದ್ಯಕೀಯ / ದೇಹದಾರ್ಢ್ಯತೆ ಮತ್ತು ಚಾಲನೆಯಲ್ಲಿ ಅರ್ಹಗೊಂಡಿರುವ ಅಭ್ಯರ್ಥಿಗಳ ಪೈಕಿ 7ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಮೆರಿಟ್ ಆಧಾರದ ಮೇಲೆ ಪ್ರವರ್ಗವಾರು 1:3 ರ ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅದನ್ನು ಲಿಖಿತವಾಗಿ ಸಮರ್ಥನೀಯ ದಾಖಲಾತಿಗಳೊಂದಿಗೆ 07 ದಿನ (ಒಂದು ವಾರ) ಗಳೊಳಗಾಗಿ ಈ ಕಛೇರಿಗೆ ಮತ್ತು ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ನಂತರ ಸ್ವೀಕೃತವಾದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರು ಇದ್ದ ಮಾತ್ರಕ್ಕೆ ಅಭ್ಯರ್ಥಿಗಳ ಆಯ್ಕೆ ಅಂತಿಮವಾಗಿದೆ ಎಂದು ಯಾವುದೇ ಕಾರಣಕ್ಕೂ ಭಾವಿಸತಕ್ಕದ್ದಲ್ಲ.

ಅಬಕಾರಿ ವಾಹನ ಚಾಲಕರ ನೇಮಕಾತಿ
ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ರವರಿಗೆ:-

1. ಕಛೇರಿಯ ಪ್ರಕಟಣಾ ಫಲಕಕ್ಕೆ.
2. District Informatics Office (NIC), ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಜಿಲ್ಲಾ ವೆಬ್ ಸೈಟ್ ನಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.
3. ಸದಸ್ಯ ಕಾರ್ಯದರ್ಶಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಪ್ರತಿ.

## ತಾತ್ಕಾಲಿಕ ಆಯ್ಕೆ ಪಟ್ಟಿ

ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಪತ್ರ ಸಂ:ಇಸಿಇ/32/ ವಾಚಾ/ನೇಮಕಾತಿ/2008, ದಿನಾಂಕ:17/11/2011 ರ ಆದೇಶದಂತೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಹಂಚಿಕೆಯಾಗಿರುವ 03 ವಾಹನ ಚಾಲಕರ ನೇರ ನೇಮಕಾತಿಯ 1:3 ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯ ಪ್ರವರ್ಗವಾರು ವಿವರ.

**ಪರಿಶಿಷ್ಟ ಜಾತಿ : ಹುದ್ದೆ –01**

| ಕ್ರ. ಸಂ. | ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು ವಿಳಾಸ | ಮೀಸಲಾತಿ ವರ್ಗೀಕರಣ | 07ನೇ ತರಗತಿ ಅಂಕಗಳು ಶೇ. | ಸಂಚಿತ ಫಲಿತಾಂಶ |
|---|---|---|---|---|---|
| 01 | 0186 | ಎಲ್.ಎಸ್. ಸುಬ್ರಮಣಿ ಬಿನ್ ಸೊಂಬಣ್ಣ, ಲಕ್ಕೊಂಡಹಳ್ಳಿ ಗ್ರಾಮ & ಅಂಚೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಪ.ಜಾ. | 59.45 | ಅರ್ಹ |
| 02 | 095 | ಎಂ. ಮುರಳೀಧರ ಬಿನ್ ಮುನಿಯಪ್ಪ, ನಾಯನಹಳ್ಳಿ ಗ್ರಾಮ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ. | ಪ.ಜಾ. | 47.50 | ಅರ್ಹ |
| 03 | 015 | ಕೆ. ಮುನಿಶಾಮಿ ಬಿನ್ ಕದಿರಪ್ಪ, ಮೈಲಾಪುರ ಗ್ರಾಮ, ಚಿನ್ನಸಂದ್ರ ಅಂಚೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | ಪ.ಜಾ. | 43.16 | ಅರ್ಹ |

**ಪರಿಶಿಷ್ಟ ಪಂಗಡ : ಹುದ್ದೆ –01**

| ಕ್ರ. ಸಂ. | ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು ವಿಳಾಸ | ಮೀಸಲಾತಿ ವರ್ಗೀಕರಣ | 07ನೇ ತರಗತಿ ಅಂಕಗಳು ಶೇ. | ಸಂಚಿತ ಫಲಿತಾಂಶ |
|---|---|---|---|---|---|
| 01 | 150 | ಕೆ.ವಿ. ವಿಜಯನಾಯಕ್ ಬಿನ್ ವೆಂಕಟರಾಮು, ಕೌಡ್ಲೆ ಅಂಚೆ ಮತ್ತು ಗ್ರಾಮ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. | ಪ.ಪಂ. | 82.26 | ಅರ್ಹ |
| 02 | 047 | ಕೌಶಿಕ್ ಬಿ. ಬಿನ್ ಬಿಳಿಗಿರಿ, #11/304, ಎಂ.ಎಂ. ರಸ್ತೆ, ಕೆಳಗಾಲ ಕೇರಿ, ವಾರ್ಡ್ ನಂ;11, ಬನ್ನೂರು ಗ್ರಾಮ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. | ಪ.ಪಂ. | 80.33 | ಅರ್ಹ |
| 03 | 056 | ರಮೇಶ್ ಕೆ.ವಿ. ಬಿನ್ ವೆಂಕಟರಮಣಪ್ಪ ಟಿ.ವಿ., ಕುಂಟ್ಲಪಲ್ಲಿ ಗ್ರಾಮ, ಪೋಲನಾಯಕನಹಳ್ಳಿ, ಮಿಟ್ಟೇಮರಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | ಪ.ಪಂ. | 65.40 | ಅರ್ಹ |

**ಸಾಮಾನ್ಯ ವರ್ಗ ಹುದ್ದೆ–01**

| ಕ್ರ. ಸಂ. | ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು ವಿಳಾಸ | ಮೀಸಲಾತಿ ವರ್ಗೀಕರಣ | 07ನೇ ತರಗತಿ ಅಂಕಗಳು ಶೇ. | ಸಂಚಿತ ಫಲಿತಾಂಶ |
|---|---|---|---|---|---|
| 01 | 0010 | ಎನ್. ಮಹೇಶ್ ಬಿನ್ ನರಸಿಂಹಯ್ಯ, 1ನೇ ಬ್ಲಾಕ್, ಗೂಳೂರು ರಸ್ತೆ, ಚೌಡಪ್ಪ ಮನೆ ಹತ್ತಿರ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | ಸಾಮಾನ್ಯ ವರ್ಗ(ಪ.ಜಾ.) | 95.60 | ಅರ್ಹ |
| 02 | 0112 | ಟಿ.ಎ. ರಘು ನಂದನ ಬಿನ್ ಅಶ್ವತ್ಥನಾರಾಯಣ, ತೂಬಗೆರೆ ಅಂಚೆ & ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಸಾಮಾನ್ಯ ವರ್ಗ | 89.1 | ಅರ್ಹ |
| 03 | 0017 | ಹರೀಶ್ ಡಿ.ಎನ್. ಬಿನ್ ನಾಗರಾಜೇಗೌಡ, ದುಗ್ಗನಹಳ್ಳಿ ಗ್ರಾಮ, ರಂಗನಾಥಪುರ ಅಂಚೆ, ಎಸ್.ಬಿ. ಹಳ್ಳಿ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. | ಸಾಮಾನ್ಯ ವರ್ಗ | 84.2 | ಅರ್ಹ |

R. [signature]

ಅಬಕಾರಿ ವಾಹನ ಚಾಲಕರ ನೇಮಕಾತಿ
ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ.

4